

ಅಳು ಅಳು... ಪರಿಣತಿ ಕುಳಿತಲ್ಲಿಯೇ ನಡುಗತೊಡಗಿದಳು. ಒಂದೆರಡು ನಿಮಿಷ ಮಗಳ ಮಾತಿಗೆ ಕಾದಳು... ಇಲ್ಲ, ಮಗಳು ಮಾತನಾಡುತ್ತಿಲ್ಲ... ಬರೀ ಅಳುತ್ತಿದ್ದಾಳೆ ಅಷ್ಟೇ! ಅದೂ ಬಸ್ ಸ್ಟ್ಯಾಂಡಿನಲ್ಲಿ! ಅಯ್ಯೋ! ಏನಾಯಿತು ನನ್ನ ಮುದ್ದು ಮಗಳಿಗೆ? ಮತ್ತೂ ಒಂದು ನಿಮಿಷ ಕಾದು, ಫೋನ್ ಕಟ್ ಮಾಡಿ, ಮತ್ತೆ ಅಕ್ಕನಿಗೇ ಫೋನ್ ಮಾಡಿದಳು: ಪುಣ್ಯ! ಲೈನ್ ಸಿಕ್ಕಿತು!

"ಪರೀ ಏನೇನೂ ಯೋಚಿಸ್ಬೇಡ... ನಾನು ನಿನ್ನ ಮಗಳು ಇಬ್ಬರೂ ಬೆಂಗಳೂರಿಗೆ ಬರ್ತಾ ಇದೀವಿ... ನಿನ್ನ ಮಗಳಿಗೆ ನೀನು ಬೇಕಂತೆ... ನಿನ್ನನ್ನು ನೋಡಬೇಕಂತೆ... ಬೆಳಗ್ಗೆ ಎದ್ದಲ್ಲಿಂದ ಒಂದೇ ಹಟ ಅವಳದ್ದು! ಅಮ್ಮನ್ನ ನೋಡಲೇಬೇಕು! ಅರ್ಥ ಆಯ್ತು ತಾನೆ? ನೋಡು ನನಗಂತೂ ತುಂಬಾ ಖುಷಿಯಾಗಿದೆ – ನನ್ನ ಮಗಳೇ ದೊಡ್ಡವಳಾದಷ್ಟು! ನಾಳೆ ಹ್ಯಾಗಿದ್ರೂ ರಜೆ ಅಲ್ವ? ಏನಾದ್ರು ಸಿಹಿ ಮಾಡು. ಅವಳು ಯಾವುದೇ ಕಾರಣಕ್ಕೂ ಇನ್ನು ನಿನ್ನ ಬಿಟ್ಟು ಇರೋದಿಲ್ವಂತೆ! ಇನ್ನೇನು ಬೇಕು ಹೇಳು ಒಬ್ಬ ಒಂಟಿ ತಾಯಿಗೆ? ಸರಿಯಮ್ಮ... ಬಸ್ ಹೊರಟಿದೆ... ಯಾವುದಕ್ಕೂ ಇವತ್ತು ರಾತ್ರಿ ಹೊತ್ತಿಗೆ ಅಲ್ಲಿ ಇರ್ತೀವಲ್ಲ!"

ಪರಿಣತಿಗೆ ತನ್ನ ಮೈಯಲ್ಲಿ ಹೊಸ ನೆತ್ತರು ಉಕ್ಕಿ ಹರಿಯುತ್ತಿರುವ ಅನುಭವ ಆಯಿತು! ತಾನು ದೊಡ್ಡವಳಾದಾಗ ಅಮ್ಮ ದೂರವಿಟ್ಟರೂ ತಾನು ಎಲ್ಲರ ಕಣ್ಣು ತಪ್ಪಿಸಿ ಅಮ್ಮನನ್ನು ಅಪ್ಪಿಕೊಂಡೇ ಕುಳಿತಿದ್ದು ನೆನಪಾಯಿತು.

ಅವಳು ಅಕ್ಕನೊಂದಿಗೆ ಮಾತನಾಡುತ್ತಿದ್ದಾಗಲೇ ಎರಡು ಬಾರಿ ಮೇಘನಾದನ್ ಫೋನ್ ಬಂದಿತ್ತು. ಟ್ಯಾಕ್ಸಿಯನ್ನು ನಿಲ್ಲಿಸಿ, ಫೋನ್‌ನಲ್ಲಿಯೇ ಜರ್ನಿ ಕ್ಯಾನ್ಸಲ್ ಮಾಡಿ, ರಿಟರ್ನ್ ಟ್ರಿಪ್ ಬುಕ್ ಮಾಡಿದಳು. ಡ್ರೈವರನಿಗೆ ವಾಪಸು ಹೋಗಲು ಹೇಳಿ, ಹಾಗೇ ಸೀಟಿಗೆ ಒರಗಿ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು ಮೇಘನಾದನ್‌ಗೆ ಮೆಸೇಜ್ ಮಾಡಿದಳು:

"ನಾನು ಬರುತ್ತಿಲ್ಲ. ಕ್ಷಮಿಸು. ದಯವಿಟ್ಟು ನನಗಾಗಿ ಕಾಯಬೇಡ. ಹೇಗೂ ಆಫೀಸಿನಲ್ಲಿ ಸಿಗುತ್ತೇವಲ್ಲ?"

## ಅಲಕ ತೀರ್ಥಹಳ್ಳಿ

'ಅಲಕ ತೀರ್ಥಹಳ್ಳಿ' ಎಂಬ ಹೆಸರಿನಲ್ಲಿ ಕತೆಗಳನ್ನು ಬರೆಯುವ ಎಚ್.ವಿ. ಲಕ್ಷ್ಮೀನಾರಾಯಣ ಅವರು ಹುಟ್ಟಿದ್ದು ಸಾಗರ ಸಮೀಪದ ಹೂಗೊಪ್ಪಲು ಎಂಬ ಪುಟ್ಟ ಹಳ್ಳಿಯಲ್ಲಿ. ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರು. 'ಈ ಕಥೆಗಳ ಸಹವಾಸವೇ ಸಾಕು' ಮತ್ತು 'ನವಿಲೆಸರ' ಅವರ ಕಥಾಸಂಗ್ರಹಗಳು. ಅವರ ಕಾದಂಬರಿ 'ಮುಂದೆ ಬರುವುದು ಮಹಾನವಮಿ'. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.